ಪಿ ಡಬ್ಲ್ಯೂ-1

<u>ಸಾಕ್ಷಿಯನ್ನು ದಿಃ 21.03.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲು 2 ನೇ ಎದುರುದಾರರ ಪರ ಶ್ರೀ ಕೆ ಎಂ ಬಿ ವಕೀಲರಿಂದಃ</u>**

ನಾನು ಪ್ರಯಾಣಿಸುತ್ತಿದ್ದ ಬೈಕನ್ನು ಮಾರುತಿ ಚಾಲನೆ ಮಾಡುತ್ತಿದ್ದ. ಅಪಘಾತವು ಎರಡು ಬೈಕ್ ಗಳ ಮದ್ಯೆ ಆಗಿದೆ ಎಂದರೆ ನಿಜ. ಅಪಘಾತವಾದ ರಸ್ತೆ 15 ರಿಂದ 20 ಅಡಿ ಅಗಲ ಇರುತ್ತದೆ. ಅಪಘಾತದ ನಂತರ ಎರಡು ಬೈಕ್ ಗಳು ರಸ್ತೆ ಮದ್ಯೆದಲ್ಲಿ ಬಿದ್ದಿವೆ ಎಂದರೆ ಸಾಕ್ಷಿ ತನ್ನ ಬೈಕ್ ಎಡಭಾಗದಲ್ಲಿ ಹೋಗುತ್ತಿದ್ದು ಹಾಗಾಗಿ ಎಡಭಾಗದಲ್ಲಿ ಬಿದ್ದಿದೆ ಎಂದು ಹೇಳುತ್ತಾರೆ. ನಮ್ಮ ಬೈಕ್ ಚಾಲಕ ಮಾರುತಿಗೆ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸಣ್ಣ ಪುಟ್ಟ ಗಾಯಗಳು ಆಗಿದ್ದವು ಎಂದು ಹೇಳತ್ತಾರೆ. ಅವರಿಗೂ ಸಹ ಚಿಕಿತ್ಸೆಗಾಗಿ ಆಸ್ಪತ್ರೆಗಾಗಿ ದಾಖಲಿಸಲಾಗಿತ್ತು. ನನಗೆ ಅಪಘಾತದ ದಿನ ಬೈಕ್ ಚಾಲನಾ ಪರವಾಗಿನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಅಪಘಾತದ ಪೂರ್ವದಲ್ಲಿ ಯಾವ ರೀತಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೆ ಈಗಾಲು ಅದೇ ಹುದ್ದೆಯಲ್ಲಿ ಹೆಚ್ಚಿನ ಸಂಬಳದಿಂದ ಕೆಲಸ ಮಾಡಿದ್ದೇನೆ ಎಂದರೆ ನಿಜ. ನಾನು ಅಪಘಾತದ ನಂತರ ಮೂರು ತಿಂಗಳು ಲಘು ಉಪಹಾರದಲ್ಲಿ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

40 ದಿನ ಸಂಬಳ ರಹಿತ ರಜೆ ಮೇಲೆ ಇದ್ದೆ ಬಗ್ಗೆ ದಾಖಲೆಗಳನ್ನು ಹಾಜರು ಮಾಡದೇ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 40 ದಿನ ಸಂಬಳ ರಹಿತ ರಜೆ ಹಾಕಿದ್ದರ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತಿಂಗಳಿಗೆ ರೂ.41,103/- ಆದಾಯವು ಹಾಲಿ ವರ್ಷ ಇದೆ ಎಂದರೆ ನಿಜ. ಅಪಘಾತದ ಪೂರ್ವದಲ್ಲಿ ನನಗೆ ಎಷ್ಟು ಸಂಬಳ ಇತ್ತು ಎಂದು ದಾಖಲೆ ಹಾಜರು ಮಾಡಿದ್ದೇನೆ. ಆಗ ನನಗೆ ತಿಂಗಳಿಗೆ ರೂ.39,000/- ಸಂಬಳ ಇತ್ತು. ಈ ಬಗ್ಗೆ ದಾಖಲೆ ಹಾಜರು

ಮಾಡಿಲ್ಲ ಎಂದರೆ ಸರಿಯಲ್ಲ.

ನನ್ನ ಚಿಕಿತ್ಸೆಗೆ ರೂ. 15 ಲಕ್ಷ ಖರ್ಚಾದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಪಡಿಸಿರುವ ಬೈಕ್ ಚಾಲಕನಿಗೆ ಆ ದಿನ ಚಾಲನಾ ಪರವಾನಿಗೆ ಇರಲಿಲ್ಲ ಆದ್ದರಿಂದ ವಿಮೆ ಕಂಪನಿ ನನಗೆ ಪರಿಹಾರ ಕೊಡಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.